# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್. ರಸ್ತೆ, ತುಮಕೂರು–572 103

ಸಂಖ್ಯೆ :ತುವಿ: ಕಾ.ಅ.ಪ:ಸಂ:2021–22/3617 ದಿನಾಂಕ: 04.01.2022

## ಅಧಿಸೂಚನೆ

**ವಿಷಯ: 2021–22ನೇ ಶೈಕ್ಷಣಿಕ ಸಾಲಿಗೆ ಎಸ್.ವಿ.ಎಸ್ ಶಿಕ್ಷಣ ಮಹಾವಿದ್ಯಾಲಯದ ಸಂಯೋಜನೆಯನ್ನು ನವೀಕರಿಸುವ ಬಗ್ಗೆ.**

**ಉಲ್ಲೇಖ:** (1) ಪ್ರಾಂಶುಪಾಲರು ಎಸ್.ವಿ.ಎಸ್ ಶಿಕ್ಷಣ ಮಹಾವಿದ್ಯಾಲಯ ಇವರ ಪತ್ರ ಸಂಖ್ಯೆ: 039/2021-22 ದಿನಾಂಕ 30.06.2021

(2) ದಿನಾಂಕ: 06.11.2021ರಂದು ನಡೆದ ವಿದ್ಯಾವಿಷಯಕ ಪರಿಷತ್ ನಿರ್ಣಯ.

(3) ದಿನಾಂಕ: 12.11.2021ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.

(4) SRC, NCTE, Bangalore ಇವರ ಆದೇಶ ಸಂಖ್ಯೆ F.SRO/NCTE/APS08831/ B.Ed/KA/2015-16/66209 ದಿನಾಂಕ:31.05.2015

(5) SRC, NCTE, ಇವರ ಆದೇಶ ಸಂಖ್ಯೆ.F.No.SRC/NCTE/KA/APS08831/ B.Ed/394th/2021/123322 ದಿನಾಂಕ: 29.01.2021

(6) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 03.01.2022

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ಪ್ರಾಂಶುಪಾಲರು **ಎಸ್.ವಿ.ಎಸ್ ಶಿಕ್ಷಣ ಮಹಾವಿದ್ಯಾಲಯ, ತುಮಕೂರು** ಇವರು 2021–22ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಣ ಕೋರಿ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ವಿಶ್ವವಿದ್ಯಾನಿಲಯದ ಸ್ಥಳೀಯ ವಿಚಾರಣಾ ಸಮಿತಿಯು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಬಿ.ಇಡಿ ಕೋರ್ಸಿನ 100 (ಒಂದು ನೂರು) ವಿದ್ಯಾರ್ಥಿಗಳ ಪ್ರವೇಶಮಿತಿಯ ಸಂಯೋಜನೆ ನವೀಕರಣಕ್ಕೆ ಶಿಫಾರಸ್ಸು ಮಾಡಿ ವರದಿ ಸಲ್ಲಿಸಿರುತ್ತದೆ. ಸದರಿ ವರದಿಯನ್ನು ಉಲ್ಲೇಖ (2) ಮತ್ತು (3) ರ ಸಭೆಗಳಲ್ಲಿ ಮಂಡಿಸಿದ್ದು ಸಭೆಗಳು ವರದಿಯನ್ನು ಅನುಮೋದಿಸಿರುತ್ತವೆ.

**ಉಲ್ಲೇಖ (4) ರ SRC, NCTE, Bangalore ಇವರ ಆದೇಶದಲ್ಲಿ ಸದರಿ ಕಾಲೇಜಿಗೆ 2015–16ನೇ ಶೈಕ್ಷಣಿಕ** ಸಾಲಿನಿಂದ ಎರಡು ವರ್ಷದ ಬಿ.ಇಡಿ ಕೋರ್ಸಿಗೆ ವಾರ್ಷಿಕ 100 (ಒಂದು ನೂರು) ವಿದ್ಯಾರ್ಥಿಗಳ ಪ್ರವೇಶ ಮಿತಿಯಂತೆ ಪ್ರತಿ ಘಟಕಕ್ಕೆ 50 ವಿದ್ಯಾರ್ಥಿಗಳಂತೆ ಎರಡು ಘಟಕಗಳಿಗೆ ಮಾನ್ಯತೆ ನೀಡಿರುತ್ತದೆ. ಸದರಿ ಆದೇಶದ ಮುಂದುವರಿಕೆಯಾಗಿ ಉಲ್ಲೇಖ (5) ರಲ್ಲಿ ಮಾನ್ಯತೆಯನ್ನು ಮುಂದುವರೆಸಿ ಆದೇಶಿಸಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000 ರ 59ನೇ ಪ್ರಕರಣದ (17) ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ತುಮಕೂರು ವಿಶ್ವವಿದ್ಯಾನಿಲಯವು 2021–22ನೇ ಶೈಕ್ಷಣಿಕ ಸಾಲಿಗೆ **ಎಸ್.ವಿ.ಎಸ್ ಶಿಕ್ಷಣ ಮಹಾವಿದ್ಯಾಲಯ, ತುಮಕೂರು** ಇಲ್ಲಿ ನಡೆಸುತ್ತಿರುವ ಬಿ.ಇಡಿ. ಕೋರ್ಸಿಗೆ ಉಲ್ಲೇಖ (4) ಮತ್ತು (05)ರ SRC, NCTE ಆದೇಶದಲ್ಲಿ ನಿಗದಿಪಡಿಸಿರುವ 50+50 ಎರಡು ಘಟಕಗಳ 100 (ಒಂದು ನೂರು) ವಿದ್ಯಾರ್ಥಿಗಳ ಪ್ರವೇಶ ಪರಿಮಿತಿಯೊಂದಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸಂಯೋಜನೆಯನ್ನು ನವೀಕರಿಸಿ ಮುಂದುವರೆಸಲು ಮಂಜೂರಾತಿ ನೀಡಲಾಗಿದೆ.

**ಷರತ್ತುಗಳು:**

1. ಪ್ರಾಂಶುಪಾಲರ ಹಾಗೂ ಅಧ್ಯಾಪಕರುಗಳ ನೇಮಕಾತಿಯಲ್ಲಿ NCTE ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
2. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕೋರ್ಸ್‌ಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನ–ರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು.
3. ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.
4. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾನಿಲಯದ ಅನುಶಾಸನ, ಪರಿನಿಯಮಾವಳಿ ಮತ್ತು NCTE ನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
5. ಕಾಲೇಜು / ಆಡಳಿತ ಮಂಡಳಿಯು ಶೇ.50% ರಷ್ಟು ವಿಶ್ವವಿದ್ಯಾನಿಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾನಿಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು ; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು. ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕ / ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

**(ಪು.ತಿ.ನೋ.)**

Scanned by TapScanner